ಶ್ರೀ ಎ. ಜಿ. ರಾಮಚಂದ್ರರಾಯರು.—ಸಾಮಾನ್ಯವಾಗಿ ಪ್ರೈಮರಿ ಸ್ಕೂಲು ಕಟ್ಟಡಗಳಿಗೆ ಖಾಸಗಿ ಜನಗಳಿಂದ ಹಣ ಬರಬೇಕೆಂದು ಕಡ್ಡಾಯ ಇರಲಿಲ್ಲ : ಸರ್ಕಾರದವರೇ ಹೆಚ್ಚು ಜವಾಬ್ದಾರಿ ವಹಿಸಿಕೊಂಡು ನೋಡಿಕೊಂಡು ಬಂದಿದ್ದಾರೆ. ಈಗ ಸ್ವಲ್ಪ ಕಷ್ಟವಾಗಿರುವುದರಿಂದ ಹೊಸರೀತಿಯಲ್ಲಿ ಮಹಾಜನಗಳ ಸಹಾಯ ಪಡೆದು ಸ್ಕೂಲುಗಳನ್ನು ಹೆಚ್ಚಿಸಬೇಕೆಂಬುದರ ಸಾಧ್ಯಾಸಾಧ್ಯತೆಯನ್ನು ಯೋಚನೆಮಾಡಲಾಗುತ್ತಿದೆ.

ಶ್ರೀ ಟಿ. ಎಸ್. ಮೂಡಲಗಿರಿಗೌಡರು.—ಆ ಪದ್ಧತಿ ಜಾರಿಯಲ್ಲಿದ್ದದ್ದು ನಿಂತುಹೋಗಲು ಕಾರಣವೇನು ?

ಶ್ರೀ ಎ. ಜಿ. ರಾಮಚಂದ್ರರಾಯರು.—ನಿಂತುಹೋಗಿಲ್ಲ ಎಂದು ಕಾಣುತ್ತದೆ.

ಶ್ರೀ ಟಿ. ಎಸ್. ಮೂಡಲಗಿರಿಗೌಡರು.—ಹಣ ಒದಗಿಸಲಾಗಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಸಾಧ್ಯವಾದಷ್ಟೂ ಹಣ ಒದಗಿಸಲಾಗಿದೆ.

(Sri S. SRINIVASA IYENGAR rose)

Mr. SPEAKER.—This is the third time this question has come up during this very session.

Free Education to Children of non-gazetted officers.

Q.—394. Sri K. PANCHAKSHARIAH (Arsikere).—

Will the Government be pleased to state :—

(*a*) whether it is under their contemplation to provide free education to the children of the non-gazetted officers as has been done by the Government of Madras ;

(*b*) if this is not possible, whether they have thought of enhancing the dearness allowance by at least Rs. 5 ?

A—Sri A. G. RAMACHANDRA RAO (Minister for Law and Education).—

(*a*) Education is free in Primary and Middle School stages for all. It is not contemplated to provide free education to any section of the people in High Schools and Colleges.

(*b*) No.

ಶ್ರೀ ಕೆ. ಪಂಚಾಕ್ಷರಯ್ಯನವರು.—ಸ್ವಾಮಿ, ಈ ರೀತಿ ತುಟ್ಟಿಭತ್ಯ ಕೊಡದೇ ಇರುವುದರಿಂದ ಎಕ್. ಜಿ. ಓ. ನೌಕರರ ಜೀವನ ನಡೆಸುವುದು ನಿಜವಾಗಿಯೂ ತೊಂದರೆಯಾಗಿದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾಯರು.—ನಮ್ಮ ದೇಶದಲ್ಲಿ ಕೆಳದರ್ಜೆ ನೌಕರರುಗಳಿಗಿಂತ ಕಷ್ಟದಲ್ಲಿರತಕ್ಕ ಮಹಾಜನರು ಬಹಳ ಜನರಿದ್ದಾರೆ ಎಂಬುದೂ ಸರ್ಕಾರದ ಗಮನದಲ್ಲಿದೆ.

ಶ್ರೀ ಕೆ. ಲಕ್ಕಪ್ಪನವರು (ಚೆನ್ನರಾಯಪಟ್ಟಣ).—ಈ ರೀತಿ 5 ರೂಪಾಯಿಗಳಂತೆ ತುಟ್ಟಿಭತ್ಯ ಕೊಟ್ಟರೆ ಎಷ್ಟು ಖರ್ಚಾಗುತ್ತದೆ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಒಂದು ರೂಪಾಯಿನಂತೆ ಕೊಟ್ಟರೂ ವರ್ಷಕ್ಕೆ ಎಪ್ಪತ್ತು ಇರಾಖೆಯ ಪ್ರೈಮರೀ ವಿಭಾಗ ಒಂದಕ್ಕೇ 2½ ಲಕ್ಷ ರೂಪಾಯಿಗಳು ಬೇಕಾಗುತ್ತವೆ.

ಶ್ರೀ ಎಸ್. ಎಂ. ಮರಿಯಪ್ಪನವರು (ಹೆರಿಯಾಪಟ್ಟಣ).—ಕೆಳದರ್ಜೆ ನೌಕರರ ಮಕ್ಕಳಿಗೆ ಕಾಲೇಜುಗಳಲ್ಲಿ half-freeship ಗೆ ಅವಕಾಶ ಮಾಡಿಕೊಟ್ಟಿದ್ದೀರಾ?

ಶ್ರೀ ಎ. ಜಿ. ರಾಮಚಂದ್ರರಾಯರು.—ಆಗಲೇ ಜವಾಬು ಹೇಳಿದ್ದೇನೆ.

Sri S. SRINIVASA IYENGAR (T.-Narasipur).—Will the Government be pleased to state whether the employees of the Railways used to get help for educating their children before the Railways were transferred to the Centre ?

Sri A. G. RAMACHANDRA RAO.—Notice.

Primary Schools having their own buildings.

Q.—412. Sri N. HUCHMASTHY GOWDA (Huliyurdurga).—

Will the Government be pleased to state :—

(*a*) the number of primary schools (Government and grant-in-aid) as on 31st March 1952 in Mysore State (information to be given talukwar and for Mysore and Bangalore Cities) ;

(*b*) out of these schools, the number of schools which have the advantage of their own buildings ?

A.—Sri A. G. RAMACHANDRA RAO (Minister for Law and Education).—

(*a*) Total number is 10,437. Districtwar information is available and is furnished hereunder. Talukwar information is being collected.

	District.		*Total No. of Schools.*
1.	Bangalore City	...	319
2.	Bangalore Civil Area	...	197
3.	Bangalore District	...	1,233
4.	Chikmagalur	...	725
5.	Chitaldrug	...	1,004
6.	Hassan	...	1,017
7.	Kolar	...	1,180
8.	Mandya	...	837
9.	Mysore	...	1,348
10.	Shimoga	...	1,069
11.	Tumkur	...	1,448
	Grand Total	...	10,437

(*b*) 6,244.